<u>**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**</u>

**ಸಿ.ಸಿ. ಸಂಖ್ಯೆ 69/2024**

**ಸಾಕ್ಷಿಯನ್ನು ದಿಃ 08.07.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಸ್ಮಿತ | ಸಿಡಬ್ಲ್ಯೂಃ 4 | ಪಿಡಬ್ಲ್ಯೂಃ 3 |
| ಗಂಡನ ಹೆಸರು | ನಂದೀಶ ಹೆಚ್.ಕೆ | | |
| ವಯಸ್ಸು | 43 ವರ್ಷ | | |
| ಕೆಲಸ | ಗೃಹಿಣಿ | | |
| ವಾಸಸ್ಥಳ | ಮಾರುತಿ ಬಡಾವಣೆ,<br>ಹುಣಸೂರು | | |

<u>**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**</u>

ಚಾಸಾ-1 ನನ್ನ ಗಂಡ. ಚಾಸಾ-2, 3, 5 ರಿಂದ 8 ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. ಈ ಘಟನೆಯ ಬಗ್ಗೆ ಪೋಲೀಸ್ ಠಾಣೆಯಲ್ಲಿ ಹೇಳಿಕೆ ನೀಡಿದ್ದೇನೆ. ದಿಃ 21.11.2023 ರಂದು ನಾವು ಜಮೀನಿನಲ್ಲಿ ಹೊಲ ಹೂಳಲು ಬೆಳಿಗ್ಗೆ 10 ಗಂಟೆಗೆ ನಾನು ಮತ್ತು ಚಾಸಾ-1, ಚಾಸಾ–6 ರಿಂದ 8 ರವರು ಹೋಗಿದ್ದೆವು. ಆಗ ಬೆಳಿಗ್ಗೆ 10.00 ಗಂಟೆಗೆ ಪಕ್ಕದ ಜಮೀನಿನವರಾದ ಆರೋಪಿತರು ಅಕ್ರಮವಾಗಿ ನಮ್ಮ ಜಮಿನಿಗೆ ಪ್ರವೇಶ ಮಾಡಿ ಚಾಸಾ-1 ರವರಿಗೆ ಬಾಯಿಗೆ ಬಂದಂತೆ ಸೂಳೆ ಮಗ, ಬೋಳಿ ಮಗ, ನಿನ್ನ ಅಮ್ಮ... ಎಂದು ಅವಾಚ್ಯ ಶಬ್ದಗಳಿಂದ ಬೈದರು. ನನಗೂ ಕೂಡ ಮುಂಡೆ, ರಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದರು. ಆರೋಪಿತರು ನಮ್ಮನ್ನು ತಳ್ಳಿ ಇನ್ನೊಮ್ಮೆ ಹೂಳಲು ಬಂದರೆ ಕೊಲೆ ಮಾಡುವುದಾಗಿ ಪ್ರಾಣ ಬೆದರಿಕೆ ಹಾಕಿದರು. ಟ್ರ್ಯಾಕ್ಟರ್ ಚಾಲಕರಾಗಿದ್ದ ಚಾಸಾ-5 ರವರಿಗೂ ಅವಾಚ್ಯ ಶಬ್ದಗಳಿಂದ ಬೈದರು. ಚಾಸಾ-6 ರಿಂದ 8 ರವರು ಸಮಾಧಾನ ಮಾಡಿ ಜಗಳ ಬಿಡಿಸಿದರು. ನಂತರ ದೂರು ಕೊಡುವಂತೆ ನನ್ನ ಗಂಡನೊಂದಿಗೆ ಠಾಣೆಗೆ ಹೋದರು. ದಿಃ 24.08.2022 ರಲ್ಲಿ ಸರ್ವೆನಂ. 87/12 ರಲ್ಲಿ 20 ಗುಂಟೆ, 87/13 ರಲ್ಲಿ 5 ಗುಂಟೆಯನ್ನು ನನ್ನ ಹೆಸರಿನಲ್ಲಿ ಖರೀದಿಸಿದ್ದೆವು. ನಂತರ ನಾನು ದಿಃ 06.07.2023 ರಂದು ಸದರಿ ಜಮೀನನ್ನು ಚಾಸಾ-1 ರವರಿಗೆ ದಾನ ಪತ್ರದ

ಮೂಲಕ ವರ್ಗಾಯಿಸಿದೆ. ಮೇಲೆ ಹೇಳಿದ ವಿಷಯವನ್ನು ಪೋಲಿಸರ ಮುಂದೆ ಹೇಳಿದ್ದೇನೆ. ಆ ದಿನ ನಮ್ಮ ಮೇಲೆ ಅವಾಚ್ಯ ಶಬ್ದಗಳಿಂದ ಬೈದು, ಹಲ್ಲೆ ಮಾಡಿ ಪ್ರಾಣ ಬೆದರಿಕೆ ಹಾಕಿದ ವ್ಯಕ್ತಿಗಳು ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರಾಗಿದ್ದಾರೆ.

**<u>ಪಾಟೀ ಸವಾಲುಃ</u> ಆರೋಪಿ ಪರ ಶ್ರೀ. RKS ವಕೀಲರಿಂದಃ**

ನಾನು ದಿಃ 24.08.2022 ರಂದು ಸರ್ವೆ ನಂ. 87/12 ರಲ್ಲಿ, 20 ಗುಂಟೆ, 87/13 ರಲ್ಲಿ 5 ಗುಂಟೆ ಮತ್ತು 86/1 ರಲ್ಲಿ ಒಂದು ಎಕರೆ 12 ಗುಂಟೆಯನ್ನು ಖರೀದಿಸಿದ್ದೆ. ನನ್ನ ಹೇಳಿಕೆಯಲ್ಲಿ ಸರ್ವೆ ನಂ. 87/12 ರಲ್ಲಿ 20 ಗುಂಟೆ ಮತ್ತು 87/13 ರಲ್ಲಿ 5 ಗುಂಟೆಯನ್ನು ಚಾಸಾ–1 ರವರು ಖರೀದಿಸಿದ್ದರು ಎಂದು ಹೇಳಿದ್ದೇನೆ ಎಂದರೆ ತಪ್ಪಾಗಿ ಬರೆದುಕೊಂಡಿದ್ದಾರೆ. ನಾನು ಆ ರೀತಿ ಪೋಲಿಸರ ಮುಂದೆ ಹೇಳಿಲ್ಲ. ಜಮೀನಿನ ದಾಖಲೆಗಳನ್ನು ಪೋಲಿಸರಿಗೆ ಕೊಟ್ಟಿದ್ದೀರಾ ಎಂದರೆ ಕೊಟ್ಟಿದ್ದೇನೆ. ಹದ್ದುಬಸ್ತು ಮಾಡಿಸಿದ ಬಗ್ಗೆ ದಾಖಲೆ ಕೊಟ್ಟಿದ್ದೇನೆ. ನನ್ನ ಗಂಡ ಚಾಸಾ–1 ರವರು ಹುಣಸೂರು ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಸ್ವಾಧೀನ ಬಿಟ್ಟು ಕೊಡುವಂತೆ ಪರಿಹಾರ ಕೋರಿ ಅಸಲು ದಾವಾ ಸಂಃ 420/2023 ನ್ನು ಸಲ್ಲಿಸಿದ್ದೇನೆ ಎಂದರೆ ಸರಿ. 2022 ರಲ್ಲಿ ಜಮೀನು ಖರೀದಿಸಿದಾಗಿನಿಂದ 2023 ರವರೆಗೆ ಆ ಜಮೀನಿನಲ್ಲಿ ಉಳುಮೆ ಮಾಡಲು ನಾವು ಹೋಗಿರಲಿಲ್ಲ. ಜಮೀನು ಖರೀದಿಸುವಾಗ ಮೂಲ ದಾಖಲೆಗಳನ್ನು ಪರಿಶೀಲಿಸಿದ್ದೇವೆ.

ದಿಃ 21.11.2023 ರಂದು ಸಾಗುವಳಿ ಮಾಡಲು ಹೋಗುವಾಗ ಚಾಸಾ–6 ರಿಂದ 8 ರವರನ್ನು ಯಾಕೆ ಕರೆದುಕೊಂಡು ಹೋಗಿದ್ದಿರಿ ಎಂದರೆ ನನ್ನ ಗಂಡನ ಸ್ನೇಹಿತರಾದ ಕಾರಣ ಜೊತೆಯಲ್ಲಿ ಬಂದಿದ್ದರು. ಚಾಸಾ–6 ರಿಂದ 8 ರವರು ಮೊದಲ ಬಾರಿಗೆ ನಮ್ಮ ಜಮೀನಿಗೆ ಬಂದಿದ್ದರು. ನಾನು ಜಮೀನು ಖರೀದಿಸುವಾಗ ಚಾಸಾ–6 ರಿಂದ 8 ರವರು ಬಂದು ಜಮೀನು ನೋಡಿಲ್ಲ. ಜಮೀನಿನಲ್ಲಿ ಯಾರು ಸ್ವಾಧೀನ ಇದ್ದರು ಎಂದು ಮಾಹಿತಿ ಪಡೆದುಕೊಂಡಿದ್ದಿರಾ ಎಂದರೆ ನನಗೆ ಮಾರಾಟ ಮಾಡಿದ್ದವರೇ ಇದ್ದರು. ಸ್ವಾಧೀನ ಯಾರೋ ಇದ್ದಾರೆ ಎಂದು ನಾನು ನೋಡಿದ್ದೆ. ಆಗ ಆರೋಪಿತರನ್ನು ನಾನು ಜಮೀನಿನಲ್ಲಿ ನೋಡಿಲ್ಲ. ಆರೋಪಿತರ ಜಮೀನು ಮತ್ತು ನಾನು ಖರೀದಿಸಿದ ಜಮೀನು ಅಕ್ಕ–

ಪಕ್ಕದಲ್ಲಿದೆ. ದಿಃ 21.11.2023 ರಂದು ಉಳುಮೆ ಮಾಡಲು ಹೋಗಿದ್ದೆವು ಎಂದು ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ. ಸುಮಾರು 60 ವರ್ಷಗಳಿಂದಲೂ ಆರೋಪಿತರು ಅವರ ಪೂರ್ವಜರ ಕಾಲದಿಂದ ಸದರಿ ಜಮೀನಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಆ ದಿನ ಆರೋಪಿತರು ನಮಗೆ ಯಾವುದೇ ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಸಿವಿಲ್ ಪ್ರಕರಣಕ್ಕೆ ಅನುಕೂಲವಾಗಲೀ ಎಂದು ಸುಳ್ಳು ದೂರನ್ನು ನೀಡಲಾಗಿದೆ ಎಂದರೆ ಸರಿಯಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.